ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂ.ಬೆಂಕೇವಿ/ಆರ್‌ಪಿಐಎಸ್/ಮರುನಾಮ/0164/2020-21 ದಿನಾಂಕ.03.09.2020

## ಸುತ್ತೋಲೆ

ವಿಷಯ: ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯವೆಂದು ಮರು ನಾಮಕರಣ ಮಾಡಿರುವ ಕುರಿತು.

ಉಲ್ಲೇಖ:1. ಕರ್ನಾಟಕ ಅಧ್ಯಾದೇಶ ಸಂ.11 - 2020-08-18 ಮತ್ತು ಗೆಝೆಟ್ ಅಧಿಸೂಚನೆ ಸಂ. ಸಂವ್ಯಶಾಇ 35 ಶಾಸನ 2020 ದಿನಾಂಕ: 19-06-2020
2. ಸರ್ಕಾರದ ಪತ್ರ ಸಂಖ್ಯೆ ಇಡಿ 106 ಯುಎನ್‌ವಿ 2020 ದಿನಾಂಕ.26.06.2020
3. ಸರ್ಕಾರದ ಪತ್ರ ಸಂಖ್ಯೆ ಇಡಿ 30 ಯುಬಿವಿ 2020 ದಿನಾಂಕ.04.08.2020
4. 24.08.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ
5. 29.08.2020 ರಂದು ಜರುಗಿದ ಸಿಂಡಿಕೇಟ್ ಸಭೆಯ ಅನುಮೋದನೆ

****

1. ಉಲ್ಲೇಖ (೧) ರ ರಾಜ್ಯ ಪತ್ರದ ಕನ್ನಡದ ಅಧಿಸೂಚನೆಯ ಪುಟ ಸಂಖ್ಯೆ 10 ಕಂಡಿಕೆ 26 ರಲ್ಲಿ "ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ" ದ ಹೆಸರನ್ನು "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" ಹಾಗೂ ಇಂಗ್ಲೀಷ್ ಅಧಿಸೂಚನೆಯ ಪುಟ ಸಂಖ್ಯೆ 21 ಕಂಡಿಕೆ 26 ರಲ್ಲಿ "Bengaluru Central University" ಬದಲಾಗಿ "Bengaluru City University" ಎಂದು ಮರುನಾಮಕರಣ ಮಾಡಿ ಈ ಕುರಿತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ಕ್ಕೆ ಅಗತ್ಯ ತಿದ್ದುಪಡಿ ಮಾಡಿ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

2. ಮೇಲಿನ ರಾಜ್ಯಪತ್ರದ ಪ್ರಕಾರ "ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ"ವನ್ನು "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" ಹಾಗೂ "Bengaluru Central University" ಬದಲಾಗಿ "Bengaluru City University" ಎಂದು ಹೆಸರು ತಿದ್ದುಪಡಿ ಮಾಡಲಾಗಿದೆ. ವಿಶ್ವವಿದ್ಯಾನಿಲಯದ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರು, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು, ವಿವಿಧ ಆಡಳಿತ, ಪರೀಕ್ಷಾ, ಶೈಕ್ಷಣಿಕ ವಿಭಾಗ, ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್, ಅಧ್ಯಯನ ಮಂಡಳಿ, ಸಂಪತ್ತಿಗೆ, ಆಪ್ತ ಶಾಖೆಗಳು, ಇಂಜಿನಿಯರಿಂಗ್, ಕ್ರೀಡಾ, ಎನ್.ಎಸ್.ಎಸ್. ಮುಂತಾದ ವಿಭಾಗಗಳು ವಿಶ್ವವಿದ್ಯಾನಿಲಯದ ಹೆಸರಿನ ಬದಲಾವಣೆಯನ್ನು ಗಮನಿಸಿ, ತಮ್ಮ ವಿಭಾಗದ ದಾಖಲೆಗಳಲ್ಲಿ ಅಗತ್ಯ ತಿದ್ದುಪಡಿ/ಬದಲಾವಣೆ ಮಾಡಲು ಸೂಚಿಸಲಾಗಿದೆ.

3. ಕುಲಸಚಿವರು (ಮೌಲ್ಯಮಾಪನ), ಹಣಕಾಸು ಅಧಿಕಾರಿಗಳು, ರಾಷ್ಟ್ರೀಯ ಸೇವೆಗಳ ಸಂಯೋಜಕರು, ಗ್ರಂಥಪಾಲಕರು, ಹಾಗೂ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಆಪ್ತ ಶಾಖೆಗಳ ಅಧಿಕಾರಿಗಳು, ತಮ್ಮ ಸುಪರ್ದಿನಲ್ಲಿರುವ ಎಲ್ಲಾ ದಾಖಲೆಗಳಲ್ಲಿ ಅಗತ್ಯ ಬದಲಾವಣೆ ಮಾಡಿಕೊಳ್ಳಲು ಸೂಚಿಸಲಾಗಿದೆ. ಆಯಾ ವಿಭಾಗಗಳಲ್ಲಿರುವ ರಬ್ಬರ್

03/09/2020

ಸ್ಟ್ಯಾಂಪ್‌ಗಳನ್ನು ಬದಲಾಯಿಸಲು ಸೂಚಿಸಲಾಗಿದೆ. ಹಿಂದೆ ಉಪಯೋಗಿಸುತ್ತಿರುವ ರಬ್ಬರ್ ಸ್ಟ್ಯಾಂಪ್‌ಗಳನ್ನು ಉಪಯೋಗಕ್ಕೆ ಬಾರದಂತೆ ಸೂಕ್ತ ರೀತಿಯಲ್ಲಿ ನಿಷ್ಕ್ರೀಯಗೊಳಿಸಿ ಆ ಕುರಿತು ಧೃಢೀಕರಣ ಪತ್ರ ಸಲ್ಲಿಸ ಬೇಕೆಂದು ತಿಳಿಸಲಾಗಿದೆ.

4. ವಿಶ್ವವಿದ್ಯಾನಿಲಯದ ವೆಬ್ ಸೈಟ್ (ಜಾಲತಾಣ) ಹಾಗೂ ತತ್ರಾಂಶದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲು ಸಂಬಂಧಿಸಿದ ಸಂಸ್ಥೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕುಲಸಚಿವರು (ಮೌಲ್ಯಮಾಪನ) ರವರು ಈ ಕುರಿತು ಅಗತ್ಯ ಕ್ರಮ ಕೈಕೊಳ್ಳಬೇಕೆಂದು ತಿಳಿಸಲಾಗಿದೆ.

5. "ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ" / "Bengaluru Central University" ವೆಂದು ಮುದ್ರಿತ ಆಗಿರುವ ಎಲ್ಲಾ ದಾಖಲೆಗಳಲ್ಲಿ "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" / "Bengaluru City University" ಎಂದು ರಬ್ಬರ್ ಸ್ಟ್ಯಾಂಪ್ ನಿಂದ ಮುದ್ರಿಸಿ ದಾಸ್ತಾನು ಇರುವವರೆಗೆ ಉಪಯೋಗಿಸಲು ಸೂಚಿಸಲಾಗಿದೆ.

6. ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು ವಿವಿಧ ವಿಭಾಗಗಳ ನಾಮಫಲಕ ಹಾಗೂ ವಿಶ್ವವಿದ್ಯಾನಿಲಯದ ಎಲ್ಲಾ ದ್ವಾರಗಳಲ್ಲಿ ಅಳವಡಿಸಿರುವ ನಾಮಫಲಕಗಳಲ್ಲಿ ಅಗತ್ಯ ತಿದ್ದುಪಡಿ ಅಥವಾ ಹೊಸದಾಗಿ ನಾಮಫಲಕ ಸಿದ್ಧಪಡಿಸಲು ಕ್ರಮಕೈಗೊಳ್ಳಲು ಮತ್ತು ಸಂಪತ್ತಿ ವಿಭಾಗದಿಂದ ವಿವಿಧ ಕಛೇರಿಗಳಿಗೆ ಅಗತ್ಯವಾದ ರಬ್ಬರ್ ಸ್ಟ್ಯಾಂಪ್‌ಗಳನ್ನು ಸಿದ್ಧಪಡಿಸಲು ಕ್ರಮಕೈಕೊಳ್ಳಲು ಸೂಚಿಸಿದೆ. ವಿವಿಧ ವಿಭಾಗಗಳ ಮುಖ್ಯಸ್ಥರು ತಮಗೆ ಅಗತ್ಯವಾದ ರಬ್ಬರ್ ಸ್ಟ್ಯಾಂಪ್‌ಗಳನ್ನು ವಿಭಾಗದ ಸಾದಿಲ್ವಾರು ಮುಂಗಡ ಹಣದಿಂದ ಖರೀದಿಸಲು / ಸಿದ್ಧಪಡಿಸಲು ಅನುಮತಿ ನೀಡಲಾಗಿದೆ.

7. ಸಾದಿಲ್ವಾರು ಮುಂಗಡ ಹಣ ಮಂಜೂರು ಆಗದ ವಿಭಾಗಗಳ ಮುಖ್ಯಸ್ಥರು/ಸಂಚಾಲಕರು ತಮಗೆ ಅಗತ್ಯವಾದ ರಬ್ಬರ್ ಸ್ಟ್ಯಾಂಪ್‌ಗಳನ್ನು ಸಿದ್ಧಪಡಿಸಿಕೊಡಲು ಸಂಪತ್ತಿ ವಿಭಾಗಕ್ಕೆ ಸೂಚಿಸಲಾಗಿದೆ. ಅಂತಹ ವಿಭಾಗದವರು ವಿವರಗಳನ್ನು ಸಂಪತ್ತಿ ವಿಭಾಗಕ್ಕೆ ನೀಡಲು ಸೂಚಿಸಲಾಗಿದೆ.

03/09/2020

ಕುಲಸಚಿವರು

ಗೆ:

1. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಮತ್ತು ಸ್ವಾಯತ್ತ ಮಹಾವಿದ್ಯಾಲಯಗಳ ಪ್ರಿನ್ಸಿಪಾಲರುಗಳಿಗೆ
2. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು
3. ಹಣಕಾಸು ಅಧಿಕಾರಿಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
4. ವಿವಿಧ ನಿಕಾಯಗಳ ಡೀನರುಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
5. ವಿವಿಧ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
6. ಗ್ರಂಥಪಾಲಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
7. ದೈಹಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

8. ಎಲ್ಲಾ ವಿಶೇಷಾಧಿಕಾರಿಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
9. ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
10. ಕುಲಪತಿ/ಕುಲಸಚಿವರು/ಕುಲಸಚಿವರು(ಮೌ)ಆಪ್ತ ಕಾರ್ಯದರ್ಶಿಗಳು,
11. ಅಧೀಕ್ಷಕರು, ಸಂಪತ್ತಿ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
12. ವಿಶ್ವವಿದ್ಯಾನಿಲಯದ ಅಭಿಯಂತರರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
13. ತೋಟಗಾರಿಕೆ ಪರಿಪಾಲಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
14. ಅಂತರ್‌ಜಾಲದಲ್ಲಿ ಪ್ರಕಟಿಸಲು
15. ರಕ್ಷಾ ಕಡತ

ಪ್ರತಿ ಗೌರವ ಪೂರ್ವಕವಾಗಿ:

1) ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ್, ಬೆಂಗಳೂರು-೫೬೦೦೦೧
2) ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
3) ಅಪರ ಮುಖ್ಯಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು
4) ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಮತ್ತು ಸಾಂಖಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5) ವಿಶ್ವವಿದ್ಯಾಲಯದ ಎಲ್ಲಾ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ
6) ವಿಶ್ವವಿದ್ಯಾಲಯದ ಎಲ್ಲಾ ಗೌರವಾನ್ವಿತ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ
7) ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ